# ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ:1 ನೇ ಉಪ ವಿಭಾಗ, ಬೆಂಗಳೂರು ರವರ ಕಛೇರಿ, ನಂ.55,
ಅಭಯ ಸಂಕೀರ್ಣ, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560 020, ದೂರವಾಣಿ- 23464114

ಸಂ: ಕಕೊಅಮ/ಸಕಾನಿಅ-1/ಗೋ.ನಗರ & ವಿ.ನಗರ /ಪಿ.ಎಂ.ಎ.ವೈ-ಹೆಚ್.ಎಫ್.ಎ-1607/2019-20/860
ದಿನಾಂಕ: 01.10.2019

ರಿಗೆ,

ಕಾರ್ಯಪಾಲಕ ಅಭಿಯಂತರರು
ನಂ.1ನೇ ವಿಭಾಗ,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಬೆಂಗಳೂರು.

ಮಾನ್ಯರೇ,

ವಿಷಯ: ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಬೆಂಗಳೂರು ನಗರದ ಗೋವಿಂದರಾಜನಗರ & ವಿಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿವಿಧ 6 ಕೊಳಚೆ ಪ್ರದೇಶವಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 1607 (ಜಿ.ಎಫ್& ಜಿ+3) ಮನೆಗಳ ನಿರ್ಮಾಣ ಕಾಮಗಾರಿಯ ಬಗ್ಗೆ.

ಉಲ್ಲೇಖ:01) ಕಾರ್ಯಾದೇಶ ಸಂಖ್ಯೆ: NO.KSDB/COMMR/TD-2/PMAY-HFA/Phase-3 /WO/2017-18/33 Date:27.03.2018.

02) ಕಾಮಗಾರಿಯ ಸ್ಥಳವನ್ನು ಹಸ್ತಾಂತರಿಸಿದ ದಿನಾಂಕ:01.06.2018

03) ತಮ್ಮ ಕಛೇರಿ ಪತ್ರ ಸಂಖ್ಯೆ: ಕಕೊಅಮ/ಕಾಪಾಅ/ಬೆಂ.ವಿ-1/PMAY-HFA / ಗೋವಿಂದರಾಜನಗರ-1607/2019-20/414, ದಿನಾಂಕ:21.09.2019

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಬೆಂಗಳೂರು ನಗರದ ಗೋವಿಂದರಾಜನಗರ & ವಿಜಯನಗರ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿನ ವಿವಿಧ 6 ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 1607 (ಜಿ.ಎಫ್.ಜಿ+3) ಮನೆಗಳ ನಿರ್ಮಾಣ ಕಾಮಗಾರಿಗೆ ಉಲ್ಲೇಖಿತ ಪತ್ರ (1) ರಲ್ಲಿ ಮೆ: ಗೌರಿ ಇನ್ಫ್ರಾ ಇಂಜಿನಿಯರ್ಸ್ ಪ್ರೈ ಲಿಮಿಟೆಡ್ ಬೆಂಗಳೂರು ರವರಿಗೆ ರೂ.89,75,33,000/-ಗಳಿಗೆ ಗುತ್ತಿಗೆ ವಹಿಸಲಾಗಿರುತ್ತದೆ. ಹಾಗೂ ಗುತ್ತಿಗೆ ಕರಾರಿನಂತೆ 24 ತಿಂಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

ಗುತ್ತಿಗೆದಾರರಿಗೆ ಮಂಡಳಿಯಿಂದ ದಿನಾಂಕ:01.06.2018 ರಂದು ಕಾಮಗಾರಿಯನ್ನು ನಿರ್ವಹಿಸುವಂತೆ ಸ್ಥಳವನ್ನು ಗುತ್ತಿಗೆದಾರರಿಗೆ ಹಸ್ತಾಂತರ ಮಾಡಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಪ್ರಾರಂಬಿಸಲು ಮುಂದಾದಾಗ ಅನುಮೋದಿತ ಫಲಾನುಭವಿಗಳು ತಮ್ಮ ಗುಡಿಸಲುಗಳನ್ನು ತೆರವುಗೊಳಿಸಿರುವುದಿಲ್ಲ ಹಾಗೂ ಫಲಾನುಭವಿವಂತಿಕೆ ಪಾವತಿಸಲು ಸಮ್ಮತಿಸಿರುವುದಿಲ್ಲ.

ಮುಂದುವರೆದಂತೆ ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ 36 (ಜಿ+3) ಮಾದರಿಯ ಮನೆಗಳ ಜಾಗದ ಪ್ರದೇಶದಲ್ಲಿ ಒಂದು ಅಯ್ಯಪ್ಪಸ್ವಾಮಿ ದೇವಾಲಯವನ್ನು ನಿರ್ಮಿಸಿದ್ದು, ಸದರಿ ದೇವಸ್ಥಾನವನ್ನು ತೆರವುಗೊಳಿಸಿ ಈ ಜಾಗವನ್ನು ದಿನಾಂಕ:06.02.2019 ರಂದು ಗುತ್ತಿಗೆದಾರರಿಗೆ ಹಸ್ತಾಂತರಿಸಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

Scanned with CamScanner

ಸದರಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯು 3ನೇ ಹಂತವಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಎಸ್.ಸಿ/ಎಸ್.ಟಿ ಫಲಾನುಭವಿಗಳಿಗೆ ರೂ.3.50 ಲಕ್ಷ ಮತ್ತು ಇತರೆ ವರ್ಗದವರಿಗೆ ರೂ.2.70 ಲಕ್ಷಗಳು ಅನುದಾನವು ಲಭ್ಯವಿದ್ದು, ಉಳಿಕೆ ಮೊತ್ತವನ್ನು ಫಲಾನುಭವಿಗಳಿಂದ ಭರಿಸಲು ಬ್ಯಾಂಕ್‌ಸಾಲ ಮತ್ತು ಕಾರ್ಮಿಕ ಇಲಾಖೆಯಿಂದ ಸಾಲ ಪಡೆಯುವ ಅವಶ್ಯಕತೆಯಿರುವುದರಿಂದ ಬ್ಯಾಂಕ್ ಮತ್ತು ಕಾರ್ಮಿಕ ಇಲಾಖೆಯಿಂದ ಸದರಿ ಸೌಲಭ್ಯವು ದೊರಕಿರುವುದಿಲ್ಲ.

ಸದರಿ ಯೋಜನೆಗೆ ಸಂಬಂದಿಸಿದಂತೆ 600 (ಜಿ+3) ಮನೆಗಳನ್ನು ನಿರ್ಮಿಸಲು ಮಾಳಿಗೊಂಡನಹಳ್ಳಿ ಗ್ರಾಮ ಸರ್ವೆ ನಂ:26ರಲ್ಲಿ ತಹಶೀಲ್ದಾರ್ ಬೆಂಗಳೂರು ದಕ್ಷಿಣ ರವರು 5.00 ಎಕರೆ ಜಾಗವನ್ನು ಮಂಡಳಿಗೆ ದಿನಾಂಕ:20.11.2018ರಂದು ಹಸ್ತಾಂತರಿಸಿದ್ದು, ಸದರಿ ಜಾಗದಲ್ಲಿ ಕಾಮಗಾರಿ ಪ್ರಾರಂಭಿಸಲು ಮುಂದಾದಾಗ ಸದರಿ ಜಾಗಕ್ಕೆ ಸಂಬಂದಿಸಿದಂತೆ ಮಾಲಿಕತ್ವ ಕುರಿತು ಮಾನ್ಯ ನ್ಯಾಯಾಲಯದಲ್ಲಿ ಮೊಕದ್ದೊಮ್ಮೆ ದಾಖಲಾಗಿದ್ದರಿಂದ ಮಂಡಳಿಯ ವಶಕ್ಕೆ ಪಡೆಯಲು ಸಾಧ್ಯವಾಗಿರುವುದಿಲ್ಲ.

ಮೇಲ್ಕಂಡ ಕಾರಣಗಳಿಂದಾಗಿ ಗುತ್ತಿಗೆದಾರರು 36 (ಜಿ+3) ಮನೆಗಳನ್ನು ಹೊರತುಪಡಿಸಿ ಉಳಿಕೆ ಯಾವುದೇ ಕಾಮಗಾರಿಯನ್ನು ಪ್ರಾರಂಬಿಸಿರುವುದಿಲ್ಲ. ಆದ್ದರಿಂದ ಟೆಂಡರ್ ನಿಯಮಾನುಸಾರ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತಾ, ಮೇಲ್ಕಂಡ ವಿವರಗಳನ್ನು ತಮ್ಮ ಅವಗಾಹನೆಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ

ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ನಂ.1ನೇ ಉಪವಿಭಾಗ, ಕಕೊಅಮ,
ಬೆಂಗಳೂರು

CS Scanned with CamScanner